**ಫ್ರಾಸಾ-1**

**ದಿನಾಂಕ 09.07.2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ : ಶ್ರೀಮತಿ ಕೆ.ಜಿ. (ಶ್ರೀ ಎ.ಎನ್.ಪಿ. ವಕೀಲರ ಪರ) ಅರ್ಜಿದಾರರ ಪರ ವಕೀಲರಿಂದಃ**

ಅಪರಾಧ ಸಂಖ್ಯೆ 37/2022 ರ ಪ್ರಥಮ ವರ್ತಮಾನ ವರದಿ, ಆ ಪ್ರಕರಣದಲ್ಲಿ ಸಲ್ಲಿಸಿದ ದೂರು, ಪಂಚನಾಮ, ಕಚ್ಚಾ ನಕಾಶೆ, ಎಂ.ವಿ.ಎ ವರದಿ ಮತ್ತು ದೋಷಾರೋಪಣಾ ಪಟ್ಟಿಯ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.6 ರಿಂದ 11 ಎಂದು ಗುರುತಿಸಲಾಯಿತು.

**ಈ ಮೂಲಕ ನನ್ನ ಸಾಕ್ಷ್ಯವನ್ನು ಅಂತ್ಯಗೊಳಿಸಿದ್ದು, ಅರ್ಜಿಯನ್ನು ಪುರಸ್ಕರಿಸಲು ಪ್ರಾರ್ಥನೆ.**

**ಪಾಟೀ ಸವಾಲು : ಶ್ರೀ ಎಸ್.ಜೆ.ಡಿ. ವಕೀಲರಿಂದ 2ನೇ ಎದುರುದಾರರ ಪರ:**

ಅಪಘಾತದ ವೇಳೆಗೆ ನನಗೆ 57 ವರ್ಷ ಎಂದರೆ 47 ವರ್ಷ. ನನ್ನ ವೈದ್ಯಕೀಯ ದಾಖಲೆಗಳಲ್ಲಿ ನನ್ನ ವಯಸ್ಸು 55 ಎಂದು ನಮೂದು ಇದೆ ಎಂದರೆ ಸರಿಯಲ್ಲ. ನಿಪಿ.4 ರ ಚಾಲನಾ ಪರವಾನಗಿಯಲ್ಲಿ ನಮೂದು ಇರುವ ನನ್ನ ಜನ್ಮ ದಿನಾಂಕ ಸರಿಯಿದೆ. ಅದರಲ್ಲಿ ನನ್ನ ಜನ್ಮ ದಿನಾಂಕ 09.06.1967 ಎಂದು ನಮೂದು ಇದೆ ಎಂದರೆ ಸರಿ.

ನಾನು ಚಾಲನೆ ಮಾಡಿದ್ದ ಮೋಟಾರ್ ಸೈಕಲ್ ಸಂಖ್ಯೆ ಕೆಎ-55/ವಿ-6970 ರ ಮಾಲೀಕ ನಾನೇ ಆಗಿರುತ್ತೇನೆ. ಅಪಘಾತವು ಮೈಸೂರು - ಬೆಂಗಳೂರು ಮುಖ್ಯ ರಸ್ತೆಯಲ್ಲಿ ಆಗಿದೆ ಎಂದರೆ ಸರಿ. ಆ ಮುಖ್ಯ ರಸ್ತೆಯ ಟೋಲ್ 2023 ರಲ್ಲಿ ಪ್ರಾರಂಭವಾಯಿತು ಎಂದರೆ ಸರಿ. ಅದೇ ವರ್ಷ ನನಗೆ ಅಪಘಾತವಾಗಿದೆ ಎಂದರೆ ಸರಿ. ಆ ರಸ್ತೆಯಲ್ಲಿ ಎರಡು ಮತ್ತು ಮೂರು ಚಕ್ರದ ವಾಹನಗಳು ಚಲಿಸಬಾರದು ಎಂದು ನಿಯಮವಿದೆ ಎಂದರೆ, ಪ್ರಾರಂಭದಲ್ಲಿ ಆ ವಾಹನಗಳು ಚಲಿಸಲು ಅವಕಾಶ ಮಾಡಿಕೊಟ್ಟಿದ್ದರು. ಆ ರಸ್ತೆಯಲ್ಲಿ ಆ ವಾಹನಗಳು ಚಲಿಸಬಾರದು ಎಂಬ ನಿಯಮವಿದ್ದರೂ ಕೂಡ ನಾನು ಮೋಟಾರ್ ಸೈಕಲ್‌ನ್ನು ಆ ರಸ್ತೆಯಲ್ಲಿ ಚಾಲನೆ ಮಾಡಿ ಅಪಘಾತಕ್ಕೆ ಕಾರಣನಾಗಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಮೋಟಾರ್ ಸೈಕಲ್‌ಗೆ ಹಿಂಬದಿಯಿಂದ ಕಾರ್ ಡಿಕ್ಕಿಪಡಿಸಿರುತ್ತದೆ. ಹಾಗಾಗಿ, ಆ ಕಾರಿನ ವೇಗ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ನಾನು ಚಾಲನೆ ಮಾಡಿದ ಮೋಟಾರ್ ಸೈಕಲ್‌ನ ಹಿಂಬದಿಯ ಸವಾರಳಾಗಿ ನನ್ನ ಹೆಂಡತಿ ಕುಳಿತಿದ್ದು, ಆಕೆಗೆ ಯಾವುದೇ ಗಾಯ ಅಪಘಾತದಲ್ಲಿ ಆಗಿರದ ಕಾರಣ ನಾನು ಬೇರೆ ಕಡೆ ಬಿದ್ದು ಮಾಡಿಕೊಂಡಿದ್ದ ಗಾಯವನ್ನು ಉಪಯೋಗಿಸಿಕೊಂಡು ಈ ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದ ಸಂಬಂಧ ದೂರನ್ನು ನನ್ನ ಮಗ ವಿನಯ್ ನೀಡಿರುತ್ತಾರೆ. ಅದರಲ್ಲಿರುವ ವಿಷಯಗಳು ನನಗೆ ಗೊತ್ತಿಲ್ಲ. ನನ್ನ ತಪ್ಪಿನಿಂದ ಅಪಘಾತವಾಗಿದ್ದರೂ

ಕೂಡ ಪರಿಹಾರ ಪಡೆಯಲು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಅಪಘಾತವಾದ ನಂತರ ರಾಮನಗರದ ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದೆ. ಆನಂತರ ಬೆಂಗಳೂರಿನ ಕಾವೇರಿ ಆಸ್ಪತ್ರೆಗೆ, ಅಲ್ಲಿಂದ ಮೈಸೂರಿನ ಕಾವೇರಿ ಆಸ್ಪತ್ರೆಗೆ ದಾಖಲಾಗಿದ್ದೆ. ನನಗೆ ಅಪಘಾತದಿಂದ ತೀವ್ರ ಸ್ವರೂಪದ ಗಾಯವಾಗಿಲ್ಲದೆ ಇದ್ದರೂ ಕೂಡ ಅಪಘಾತವಾದ ನಂತರ ಬೇರೆ ಕಡೆ ನನಗೆ ಆಗಿದ್ದ ಗಾಯವನ್ನು ಬಳಸಿಕೊಂಡು ಮೈಸೂರಿನ ಕಾವೇರಿ ಆಸ್ಪತ್ರೆಗೆ ದಾಖಲಾಗಿ, ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ನನಗೆ ವಯಸ್ಸಾಗಿರುವುದರಿಂದ ವಯೋ ಸಹಜ ಖಾಯಿಲೆಯಿಂದ ಬಳಲುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವೈದ್ಯಕೀಯ ಬಿಲ್ಲುಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ನನಗೆ ತಿಂಗಳಿಗೆ ರೂ.30,000-00 ಆದಾಯವಿತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನನ್ನ ಮಗ ಕೆಲಸ ಮಾಡುತ್ತಿದ್ದು, ನನ್ನನ್ನು ಮೊದಲಿನಿಂದಲೂ ನೋಡಿಕೊಳ್ಳುತ್ತಿದ್ದಾನೆ ಎಂದರೆ ಸರಿಯಲ್ಲ. ನನಗೆ ವಯಸ್ಸಾಗಿದ್ದರಿಂದ ನಾನು ಮೊದಲಿನಿಂದಲೂ ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಈಗ ನನ್ನನ್ನು ನನ್ನ ಹೆಂಡತಿ ಮತ್ತು ಮಗ ನೋಡಿಕೊಳ್ಳುತ್ತಿದ್ದಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಅಪಘಾತವು ನನ್ನ ತಪ್ಪಿನಿಂದ ಆಗಿರುವುದರಿಂದ ನನಗೆ ಪರಿಹಾರವನ್ನು

ಕೊಡಲು 2ನೇ ಎದುರುದಾರರು ಹೊಣೆಗಾರಿಕೆ ಹೊಂದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಎಂ.ಎ.ಸಿ.ಟಿ., ತಿ.ನರಸೀಪುರ.**